952/2022

ಕರ್ನಾಟಕ ಸರ್ಕಾರ

ನಿರ್ದೇಶಕರ ಕಛೇರಿ,ಪದವಿ ಪೂರ್ವ ಶಿಕ್ಷಣ ಇಲಾಖೆ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-560012

ಇ-ಮೇಲ್:commissioner.pue@gmail.com ಸ್ಥಿರ ದೂರವಾಣಿ ಸಂ:080-23562033

---

ಸಂಖ್ಯೆ: E 778131 DDPUNN-EST0EST1(OTH)/11/2022-ADMIN

ದಿನಾಂಕ: 06-08-2022

**ಕಾಲೇಜು ಸಂಕೇತ ಸಂಖ್ಯೆ: ಎನ್ ಎನ್-0390**

# ಜ್ಞಾಪನ

ವಿಷಯ: ಮಹಾಜನ ವಿದ್ಯಾಸಂಸ್ಥೆ(ರಿ), ಜಯಲಕ್ಷ್ಮೀಪುರಂ, ಮೈಸೂರು-570012 ಇವರಿಗೆ 2022-23ನೇ ಶೈಕ್ಷಣಿಕ ಸಾಲಿನಿಂದ ಆರ್‌ವಿಪಿಬಿ ಪಿಯು ಕಾಲೇಜು ಪೂಜಾ ಭಾಗವತ್ ಸ್ಮಾರಕ ಮಹಾಜನ ವಿದ್ಯಾಕೇಂದ್ರ, ಕೆ.ಆರ್.ಎಸ್.ರಸ್ತೆ, ಕೆ.ಕೆ.ಟೈರ್ ಎದುರು, ಮೇಟಗಹಳ್ಳಿ, ಮೈಸೂರು-16 ಇಲ್ಲಿ ಪ್ರಾರಂಭಿಸಲು ಪ್ರಥಮ ಶೈಕ್ಷಣಿಕ ಮಾನ್ಯತೆ ನೀಡುವ ಬಗ್ಗೆ.

ಉಲ್ಲೇಖ: 1. ಉಪನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಮೈಸೂರು ಜಿಲ್ಲೆ ಇವರ ಪತ್ರಸಂಖ್ಯೆ: ಪಪೂಶಿಇ:ಕಾಲೇಜು ಮಂಜೂರಾತಿ 01:2022-2023 ದಿನಾಂಕ: 17-05-2022

2. ಪದವಿ ಪೂರ್ವ ಶಿಕ್ಷಣ ಇಲಾಖೆ ನಿರ್ದೇಶಕರ ನಡವಳಿ ಆದೇಶ ಸಂಖ್ಯೆ: DDPUNN-EST 0EST1 (OTH)/11/2022-ADMIN ದಿನಾಂಕ: 20-06-2022

3. ಉಪನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಮೈಸೂರು ಜಿಲ್ಲೆ ಇವರ ಪತ್ರ ಸಂಖ್ಯೆ: ಪಪೂಶಿಇ.ಪ್ರ.ಶೈ.ಮಾನ್ಯತೆ 2022-23/ ದಿನಾಂಕ:25-06-2022

******

ಮಹಾಜನ ವಿದ್ಯಾಸಂಸ್ಥೆ(ರಿ), ಜಯಲಕ್ಷ್ಮೀಪುರಂ, ಮೈಸೂರು-570012 ಈ ವಿದ್ಯಾ ಸಂಸ್ಥೆಗೆ ಆರ್‌ವಿಪಿಬಿ ಪಿಯು ಕಾಲೇಜು ಪೂಜಾ ಭಾಗವತ್ ಸ್ಮಾರಕ ಮಹಾಜನ ವಿದ್ಯಾಕೇಂದ್ರ, ಕೆ.ಆರ್.ಎಸ್.ರಸ್ತೆ, ಕೆ.ಕೆ.ಟೈರ್ ಎದುರು, ಮೇಟಗಹಳ್ಳಿ, ಮೈಸೂರು-16 ಈ ಹೆಸರಿನ ಖಾಸಗಿ ಅನುದಾನ ರಹಿತ ಪದವಿ ಪೂರ್ವ ಕಾಲೇಜನ್ನು ಮಂಜೂರು ಮಾಡುವ ಕುರಿತು ಉಲ್ಲೇಖ-1ರಲ್ಲಿ ಈ ಕಚೇರಿಗೆ ಪ್ರಸ್ತಾವನೆ ಸಲ್ಲಿಸಲಾಗಿರುತ್ತದೆ.

ಉಲ್ಲೇಖ-2ರ ರೀತ್ಯ ಸದರಿ ವಿದ್ಯಾಸಂಸ್ಥೆಗೆ 2022-23ನೇ ಶೈಕ್ಷಣಿಕ ಸಾಲಿನಿಂದ ಈ ಮೇಲೆ ನಮೂದಿಸಿದ ಖಾಸಗಿ ಶಾಶ್ವತ ಅನುದಾನ ರಹಿತ ಪದವಿ ಪೂರ್ವ ಕಾಲೇಜನ್ನು ಮಂಜೂರು ಮಾಡಿ ಆದೇಶಿಸಲಾಗಿರುತ್ತದೆ.

ಉಲ್ಲೇಖ: 2ರ ಪದವಿ ಪೂರ್ವ ಶಿಕ್ಷಣ ಇಲಾಖೆಯ ನಿರ್ದೇಶಕರ ನಡಾವಳಿ ಆದೇಶದಲ್ಲಿನ ಷರತ್ತುಗಳನ್ವಯ ಸದರಿ ಪದವಿ ಪೂರ್ವ ಕಾಲೇಜಿಗೆ ಅಗತ್ಯ ಮೂಲಭೂತ ಸೌಕರ್ಯಗಳನ್ನು ಒದಗಿಸಿಕೊಂಡಿರುವ ಬಗ್ಗೆ, ಕಾಲೇಜು ಕಟ್ಟಡವು ಎಲ್ಲಾ ಕೋನಗಳಿಂದ ಸುಭದ್ರವಾಗಿರುವ ಬಗ್ಗೆ, ಪ್ರಚಲಿತ ನಿಯಮಗಳನ್ವಯ ಪರಿಶೀಲಿಸಿದ ನಂತರವೇ ಅಗತ್ಯ ಮಾಹಿತಿಗಳಾದ ಸ್ಥಿರನಿಧಿ ಠೇವಣಿ, ಭದ್ರತಾ ಠೇವಣಿ, ನೋಂದಣಿ ಶುಲ್ಕ ಇವುಗಳೊಂದಿಗೆ ಪ್ರಸ್ತಾವನೆ ಸಲ್ಲಿಸುವಂತೆ ಜಿಲ್ಲಾ ಉಪನಿರ್ದೇಶಕರಿಗೆ ಸೂಚಿಸಲಾಗಿತ್ತು.

ಉಲ್ಲೇಖ (03)ರಲ್ಲಿ ಜಿಲ್ಲಾ ಉಪ ನಿರ್ದೇಶಕರು ಹೊಸದಾಗಿ ಪ್ರಾರಂಭಿಸಲು ಉದ್ದೇಶಿಸಿರುವ ಪದವಿ ಪೂರ್ವ ಕಾಲೇಜಿಗೆ ಭೇಟಿ ನೀಡಿ ವರದಿ ಸಹಿತ ಪ್ರಸ್ತಾವನೆ ಸಲ್ಲಿಸಿರುತ್ತಾರೆ. ಸದರಿ ಕಾಲೇಜಿಗೆ 2022-23ನೇ ಸಾಲಿಗೆ ಪ್ರಥಮ ಶೈಕ್ಷಣಿಕ ಮಾನ್ಯತೆ ನೀಡಬಹುದೆಂದು ಶಿಫಾರಸ್ಸು ಮಾಡಿರುತ್ತಾರೆ.

ಈ ಹಿನ್ನೆಲೆಯಲ್ಲಿ ಪ್ರಸ್ತಾವನೆಯನ್ನು ಪರಿಶೀಲಿಸಿ ಉಲ್ಲೇಖ:3ರ ಪ್ರಕಾರ 2022-23ನೇ ಸಾಲಿನಿಂದ ಕಾಲೇಜನ್ನು ಪ್ರಾರಂಭಿಸಲು ಜಿಲ್ಲಾ ಉಪ ನಿರ್ದೇಶಕರ ಶಿಫಾರಸ್ಸು ಆಧರಿಸಿ ಪ್ರಥಮ ಶೈಕ್ಷಣಿಕ ಮಾನ್ಯತೆ ನೀಡಲಾಗಿದೆ ಹಾಗೂ ಕೆಳಕಂಡ ಭಾಷೆ ಮತ್ತು ಐಚ್ಛಿಕ ವಿಷಯಗಳನ್ನೊಳಗೊಂಡ ಸಂಯೋಜನೆಗಳನ್ನು ಬೋಧಿಸಲು ಕೆಳಕಂಡ ನಿಬಂಧನೆ ಮತ್ತು ಷರತ್ತಿಗೆ ಒಳಪಟ್ಟು ಅನುಮತಿ ನೀಡಿದೆ.

Scanned with CamScanner

| ಕಾಲೇಜಿನ ವಿವರ | |
|---|---|
| ಕಾಲೇಜಿನ ಹೆಸರು ಮತ್ತು ಪೂರ್ಣ ವಿಳಾಸ | ಆರ್‌ವಿಪಿಬಿ ಪಿಯು ಕಾಲೇಜು ಪೂಜಾ ಭಾಗವತ್ ಸ್ಮಾರಕ ಮಹಾಜನ ವಿದ್ಯಾಕೇಂದ್ರ, ಕೆ.ಆರ್.ಎಸ್.ರಸ್ತೆ, ಕೆ.ಕೆ.ಟೈರ್ ಎದುರು, ಮೇಟಗಹಳ್ಳಿ, ಮೈಸೂರು-16 |
| ಪ್ರಥಮ ಶೈಕ್ಷಣಿಕ ಮಾನ್ಯತೆ ನೀಡಿದ ವರ್ಷ | **2022-23** |
| ಕಾಲೇಜು ಸಂಕೇತ ಸಂಖ್ಯೆ | NN **-0390** |

| ಬೋಧಿಸಲು ಮಂಜೂರಾತಿ ನೀಡಿರುವ ಭಾಷೆಗಳು / ಐಚ್ಛಿಕ ವಿಷಯಗಳು / ಸಂಯೋಜನೆಗಳು / ವಿಭಾಗಗಳು | | | |
|---|---|---|---|
| **ಭಾಗ-1** | **ಭಾಗ-2** | ಸಂಯೋಜನೆಗಳು | ವಿಭಾಗಗಳು |
| ಕನ್ನಡ, ಇಂಗ್ಲೀಷ್, ಹಿಂದಿ, ಸಂಸ್ಕೃತ | ಭೌತಶಾಸ್ತ್ರ, ರಸಾಯನಶಾಸ್ತ್ರ ಗಣಿತ ಜೀವಶಾಸ್ತ್ರ | ಪಿ.ಸಿ.ಎಂ.ಬಿ **(P.C.M.B)** | **01** |
| | ಭೌತಶಾಸ್ತ್ರ , ರಸಾಯನಶಾಸ್ತ್ರ , ಗಣಿತ, ಗಣಕ ವಿಜ್ಞಾನ | ಪಿ.ಸಿ.ಎಮ್.ಸಿಎಸ್ **(P.C.M.Cs)** | **01** |
| | ಅರ್ಥಶಾಸ್ತ್ರ ವ್ಯವಹಾರ ಅಧ್ಯಯನ ಲೆಕ್ಕಶಾಸ್ತ್ರ, ಗಣಕ ವಿಜ್ಞಾನ | ಇ.ಬಿ.ಎ.ಸಿಎಸ್ **(E.B.A.Cs)** | **01** |
| ( ಮೂರು ಸಂಯೋಜನೆ, ಮೂರು ವಿಭಾಗ) | | | |

<u>ನಿಬಂಧನೆಗಳು / ಷರತ್ತುಗಳು :-</u>

1.ಶೈಕ್ಷಣಿಕ ಅನುಮತಿಯು ಶಾಶ್ವತ ಅನುದಾನ ರಹಿತ**(Permanently Without Grant-in-Aid)** ಷರತ್ತಿಗೆ ಒಳಪಟ್ಟಿದೆ.

2.ಆಡಳಿತ ಮಂಡಳಿಯವರು ನಿಯಮಾನುಸಾರ ಕಾಲೇಜಿಗೆ ಅಗತ್ಯವಾದ ಕಟ್ಟಡ ಪ್ರಯೋಗಾಲಯ, ಪೀಠೋಪಕರಣ, ಪಾಠೋಪಕರಣ, ಆಟದ ಮೈದಾನ, ಗ್ರಂಥಾಲಯ ಹಾಗೂ ಇತರೆ ಅಗತ್ಯ ಮೂಲಭೂತ ಸೌಲಭ್ಯಗಳನ್ನು ಕಾಲೇಜು ಪ್ರಾರಂಭಿಸುವ ಸಮಯದೊಳಗೆ ಒದಗಿಸತಕ್ಕದ್ದು. ಆಡಳಿತ ಮಂಡಳಿಯವರು ಸರ್ಕಾರಿ ಆದೇಶದಲ್ಲಿನ ಷರತ್ತು ಪಾಲಿಸಿರುವುದನ್ನು ಜಿಲ್ಲಾ ಉಪನಿರ್ದೇಶಕರು ಪರಿಶೀಲಿಸಿ ಖಚಿತಪಡಿಸಿಕೊಳ್ಳುವುದು.

3.ಅನುಮತಿಸಿದ ಭಾಷೆ / ವಿಷಯಗಳು ಹಾಗೂ ಸಂಯೋಜನೆಗಳನ್ನು ಬೋಧಿಸಲು ಮಾತ್ರ ಅನುಮತಿ ನೀಡಿದೆ.

4.ಕರ್ನಾಟಕ ಶೈಕ್ಷಣಿಕ ಸಂಸ್ಥೆಗಳು (ಖಾಸಗಿ ಅನುದಾನ ರಹಿತ ಪ್ರಾಥಮಿಕ, ಪ್ರೌಢ ಹಾಗೂ ಪದವಿ ಪೂರ್ವ ಶಿಕ್ಷಣ ಸಂಸ್ಥೆಗಳ ಸಿಬ್ಬಂದಿಗಳ ಕೆಲವು ಸೇವಾ ಷರತ್ತು ಮತ್ತು ನಿಬಂಧನೆಗಳು) ನಿಯಮಾವಳಿ 2005 ರಲ್ಲಿ ಸೂಚಿಸಿರುವಂತೆ ಸಂಸ್ಥೆಯಲ್ಲಿ ಕಾಲೇಜಿನ ವಿವಿಧ ಹುದ್ದೆಗಳಿಗೆ ನೇಮಕ ಮಾಡಿಕೊಳ್ಳುವ ಸಿಬ್ಬಂದಿಗೆ ಸೇವಾ ನಿಯಮಗಳನ್ವಯ ಸೇವಾವಹಿ ತೆರೆದು ಅವರಿಗೆ ಕನಿಷ್ಠ ವೇತನವನ್ನು ಕ್ರಾಸ್ಡ್ ಚೆಕ್ ಮೂಲಕ ಪಾವತಿ ಮಾಡತಕ್ಕದ್ದು ಮತ್ತು ಸೇವಾ ನಿಯಮಗಳನ್ನು ಕಡ್ಡಾಯವಾಗ ಚಾಚೂ ತಪ್ಪದೇ ಪಾಲಿಸತಕ್ಕದ್ದು.

5.ಪ್ರಸ್ತುತ ಜಾರಿಯಲ್ಲಿರುವ ನೇಮಕಾತಿ ನಿಯಮಗಳು ಮತ್ತು ಮೀಸಲಾತಿ ನಿಯಮಗಳ ಅನ್ವಯ ಹಾಗೂ ಪದವಿ ಪೂರ್ವ ಶಿಕ್ಷಣ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳ ಅನ್ವಯ ಹಾಗೂ ಸರ್ಕಾರವು ಕಾಲಕಾಲಕ್ಕೆ ಜಾರಿಗೊಳಿಸುವ ನೇಮಕಾತಿ ನಿಯಮಗಳ ಅನ್ವಯ ಅರ್ಹ ಬೋಧಕ ಮತ್ತು ಬೋಧಕೇತರ ನೌಕರರನ್ನು ನೇಮಕ ಮಾಡಿಕೊಳ್ಳತಕ್ಕದ್ದು.

6.ಸದರಿ ಕಾಲೇಜಿಗೆ ಪ್ರಿನ್ಸಿಪಾಲರನ್ನು ನೇರ ನೇಮಕಾತಿಯ ಮೂಲಕ ನೇಮಕ ಮಾಡಿಕೊಳ್ಳಲು ಅವಕಾಶವಿರುವುದಿಲ್ಲ. ಉಪನ್ಯಾಸಕರಾಗಿ ನೇಮಕಗೊಂಡವರಲ್ಲಿ ನಿಯಮಗಳನ್ವಯ ಸೇವಾ ಜೇಷ್ಠತೆ ಹೊಂದಿರುವವರನ್ನು ಪ್ರಿನ್ಸಿಪಾಲರಾಗಿ

Scanned with CamScanner

ನೇಮಕ ಮಾಡಬಹುದು.ಯಾವುದೇ ಹೊಸ ಭಾಷೆ / ವಿಷಯ / ವಿಭಾಗಸಂಯೋಜನೆಯನ್ನು ನಿರ್ದೇಶನಾಲಯದ ಪೂರ್ವಾನುಮತಿ ಇಲ್ಲದೆ ಪ್ರಾರಂಭಿಸತಕ್ಕದ್ದಲ್ಲ.

7.ಸದರಿ ಕಾಲೇಜಿನಲ್ಲಿ ಬೋಧಿಸಲು ಅವಕಾಶವಿರುವ ಯಾವುದಾದರೊಂದು ವಿಷಯದಲ್ಲಿ ಕನಿಷ್ಠ ಶೇಕಡಾವಾರು 55 ಅಂಕಗಳನ್ನು ಸ್ನಾತಕೋತ್ತರ ಪದವಿ (ಎಂ.ಎ., ಎಂ.ಎಸ್‌ಸಿ, ಎಂ.ಕಾಂ ಹಾಗೂ ಬಿ.ಇಡಿ) ಪಡೆದವರು ಹಾಗೂ ಕಾಲೇಜಿನಲ್ಲಿ ಕನಿಷ್ಠ 5 ವರ್ಷಗಳ ಬೋಧನಾ ಅನುಭವವಿರುವ ಕಾಲೇಜಿನ ಮುಖ್ಯಸ್ಥರು / ಪ್ರಿನ್ಸಿಪಲ್ ಆಗಿರಬೇಕು.

8.ಸದರಿ ಕಾಲೇಜಿನಲ್ಲಿ ಬೋಧಿಸಲು ಅವಕಾಶವಿರುವ ಆಯಾ ವಿಷಯದಲ್ಲಿ ಕನಿಷ್ಠ ಶೇಕಡಾವಾರು 55 ಅಂಕಗಳನ್ನು ಸ್ನಾತಕೋತ್ತರ ಪದವಿ ಮತ್ತು ಬಿ.ಇಡಿ ಪದವಿ ಹೊಂದಿದ ಆಯಾ ವಿಷಯವನ್ನು ಬೋಧಿಸುವ ಅರ್ಹರನ್ನು

ಉಪನ್ಯಾಸಕರನ್ನಾಗಿ ನೇಮಿಸಕೊಳ್ಳತಕ್ಕದ್ದು. ಹಾಗೂ ವಿದ್ಯಾರ್ಥಿಗಳಿಗೆ ಗುಣಮಟ್ಟದ ಮತ್ತು ಮೌಲ್ಯವರ್ಧಿತ ಶಿಕ್ಷಣವನ್ನು ಬೋಧಿಸತಕ್ಕದ್ದು.

9.ಪ್ರತಿಯೊಂದು ಸೆಕ್ಷನ್‌ನಲ್ಲೂ ಕನಿಷ್ಠ 40 ವಿದ್ಯಾರ್ಥಿಗಳ ಸಂಖ್ಯೆ ಕಾಪಾಡಿಕೊಳ್ಳುವುದು ಮತ್ತು ಗರಿಷ್ಠ 80 ವಿದ್ಯಾರ್ಥಿಗಳ ಮಿತಿಯೊಳಗೆ ದಾಖಲಾತಿ ಮಾಡಿಕೊಳ್ಳತಕ್ಕದ್ದು.

10.ಪ್ರಯೋಗಾಲಯವು (ವಿಜ್ಞಾನ ವಿಷಯಕ್ಕೆ ಮಾತ್ರ) ನಿರ್ದೇಶನಾಲಯವು ಅನುಮೋದಿಸಿದ ಪಠ್ಯಕ್ರಮ ಪಟ್ಟಿಯ ಪ್ರಕಾರ ಉಪಕರಣಗಳನ್ನು ಹೊಂದಿರಬೇಕು.

11.ಗಣಕ ವಿಜ್ಞಾನ ವಿಭಾಗಕ್ಕೆ ಸಂಬಂಧಿಸಿದಂತೆ ಕನಿಷ್ಠ 10 ವಿದ್ಯಾರ್ಥಿಗಳಿಗೆ ಒಂದರಂತೆ (10:1) ಗಣಕ ಯಂತ್ರಗಳಿರಬೇಕು.

12.ಕಾಲಕಾಲಕ್ಕೆ ಸರ್ಕಾರದಿಂದ ನಿಗದಿಪಡಿಸುವ ದರದಂತೆ ಫೀ / ಶುಲ್ಕಗಳನ್ನು ಮಾತ್ರ ವಿದ್ಯಾರ್ಥಿಗಳಿಂದ ಪಡೆಯತಕ್ಕದ್ದು. ಯಾವುದೇ ಕಾರಣಕ್ಕೂ ವಿದ್ಯಾರ್ಥಿಗಳಿಂದ ಪೋಷಕರಿಂದ ದೇಣಿಗೆ ರೂಪದಲ್ಲಿ ಹಣವನ್ನು ಪಡೆಯತಕ್ಕದ್ದಲ್ಲ.

13. ಪದವಿ ಪೂರ್ವ ಕಾಲೇಜಿನ ಆವರಣದಲ್ಲಿ ಪದವಿ ಪೂರ್ವ ತರಗತಿಗಳನ್ನು ಮಾತ್ರ ನಡೆಸತಕ್ಕದ್ದು. ಇಂಟಿಗ್ರೇಟೆಡ್ ಕೋರ್ಸ್/ಕೋಚಿಂಗ್ ನಡೆಸತಕ್ಕದ್ದಲ್ಲ. ಒಂದೊಮ್ಮೆ ಇಂತಹ ತರಗತಿಗಳನ್ನು ಕಾನೂನು ಉಲ್ಲಂಘಿಸಿ ನಡೆಸುತ್ತಿರುವುದಾಗಿ ವಿದ್ಯಾರ್ಥಿಗಳಿಂದ / ಪೋಷಕÀರಿಂದ / ಸಾರ್ವಜನಿಕರಿಂದ ದೂರುಗಳು ಬಂದಲ್ಲಿ ಈ ವಿಷಯವನ್ನು ಇಲಾಖೆಯು ಗಂಭೀರವಾಗಿ ಪರಿಗಣಿಸಿ ಕಾಲೇಜಿನ ಮಾನ್ಯತೆಯನ್ನು ಹಿಂಪಡೆಯುವುದಲ್ಲದೆ, ಕಾಲೇಜಿನ ಮಂಜೂರಾತಿ ಆದೇಶವನ್ನು ರದ್ದುಪಡಿಸಲಾಗುವುದು.

14.ಏನೇ ಬದಲಾವಣೆ ಮಾಡುವುದಾದರೆ ನಿರ್ದೇಶನಾಲಯದ ಪೂರ್ವಾನುಮತಿ ಪಡೆಯಬೇಕು.

15.ಪ್ರತಿ ವರ್ಷ ಮಾನ್ಯತೆ ನವೀಕರಣವನ್ನು ಕಡ್ಡಾಯವಾಗಿ ಪಡೆದುಕೊಳ್ಳತಕ್ಕದ್ದು ಹಾಗು ವಿಚ್ಛಿನ್ನತೆ ಇಲ್ಲದೆ ಕಾಲೇಜನ್ನು ನಡೆಸತಕ್ಕದ್ದು. ವಿಚ್ಛಿನ್ನತೆ ಹೊಂದಿದ ನಂತರ ವಿದ್ಯಾರ್ಥಿಗಳ ದಾಖಲಾತಿಗೆ ಅವಕಾಶವಿರುವುದಿಲ್ಲ.

16.ಯಾವುದೇ ಕಾರಣಕ್ಕೂ ಸ್ಥಳ ಬದಲಾವಣೆಗೆ ಅವಕಾಶವಿರುವುದಿಲ್ಲ.

17.ಕರ್ನಾಟಕ ಶಿಕ್ಷಣ ಕಾಯ್ದೆ 1983ರ ನಿಯಮಗಳನ್ನು ಹಾಗೂ ಕರ್ನಾಟಕ ಪದವಿ ಪೂರ್ವ ಶಿಕ್ಷಣ (ಶೈಕ್ಷಣಿಕ, ನೋಂದಣಿ, ಆಡಳಿತ ಮತ್ತು ಸಹಾಯಾನುದಾನ ಇತರೆ) ನಿಯಮಗಳು 2006ರ ನಿಯಮಗಳು ಸರ್ಕಾರದ ಅಧಿಸೂಚನೆ ಸಂಖ್ಯೆ ಇಡಿ 136 ಟಿಪಿಯು 1999 ದಿನಾಂಕ.09-10-2006 ರಲ್ಲಿ ಜಾರಿಗೆ ಬಂದಿದ್ದು, ಸದರಿ ನಿಯಮಗಳನ್ನು ಚಾಚೂ ತಪ್ಪದೇ, ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು. ಮತ್ತು ಕಾಲಕಾಲಕ್ಕೆ ಹೊರಡಿಸಲಾಗುವ ಎಲ್ಲಾ ಆದೇಶಗಳನ್ನು ಹಾಗೂ ನಿಯಮಗಳನ್ನು ಪಾಲಿಸತಕ್ಕದ್ದು.

18.ಕರ್ನಾಟಕ ಖಾಸಗಿ ಶಿಕ್ಷಣ ಸಂಸ್ಥೆಗಳ(ಶಿಸ್ತು ಮತ್ತು ನಿಯಂತ್ರಣ)ನಿಯಮಗಳು 1978ರ ನಿಯಮಗಳನ್ನು ತಪ್ಪದೆ ಪಾಲಿಸತಕ್ಕದ್ದು.

19.2022-23ನೇ ಸಾಲಿನ ಪ್ರಥಮ ಹಾಗೂ ದ್ವಿತೀಯ ಪಿಯುಸಿ ದಾಖಲಾತಿ ಮತ್ತು ಇತರ ಚಟುವಟಿಕೆಗಳ ಕೈಪಿಡಿಯಲ್ಲಿ ಸೂಚಿಸಿರುವ /ಸೂಚಿಸುವ ಎಲ್ಲಾ ನಿಯಮಗಳನ್ನು ತಪ್ಪದೇ ಪಾಲಿಸತಕ್ಕದ್ದು.

20. Govt Notification No. ED 136 TPU 1999 Date 09-10-2006ರ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು.

21.ಸಂಸ್ಥೆಯ ಬೈಲಾ ಪ್ರಕಾರ ಅಧಿಕೃತ ಅಧಿಕಾರವನ್ನು ಹೊಂದಿರುವ ಆಡಳಿತ ಮಂಡಳಿಯ ಒಬ್ಬರು ಮಾತ್ರ ಇಲಾಖೆ / ಸರ್ಕಾರದೊಂದಿಗೆ ವ್ಯವಹರಿಸುವುದು.

22.ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 709 ಪಿಜಿಸಿ 2017 ದಿನಾಂಕ:08-03-2018 ರಂತೆ safety and security of students ನಿಯಮಗಳ ಅನುಸಾರ ವಿದ್ಯಾಸಂಸ್ಥೆಯು ಅಗತ್ಯ ಮೂಲಭೂತ ಸೌಕರ್ಯಗಳನ್ನು ಒದಗಿಸಿಕೊಂಡಿರುವ ಬಗ್ಗೆ, ಶಾಲಾ ಕಾಲೇಜುಗಳ ಕಟ್ಟಡವು ಸುರಕ್ಷಿತ ಮತ್ತು ಎಲ್ಲಾ ಕೋನಗಳಿಂದ ಸುಭದ್ರವಾಗಿದೆ ಎಂಬುದನ್ನು ನ್ಯಾಷನಲ್ ಬಿಲ್ಡಿಂಗ್ ಕೋಡ್ ಆಫ್ ಇಂಡಿಯಾ ಮಾನದಂಡಗಳನ್ವಯ ಸುರಕ್ಷತಾ

Scanned with CamScanner

ನಿಬಂಧನೆಗಳನ್ವಯ ಕಟ್ಟಡ ನಿರ್ಮಿಸಿರುವುದನ್ನು ಮತ್ತು ಅಗ್ನಿಶಮನ ಉಪಕರಣಗಳನ್ನು ಅಳವಡಿಸಿಕೊಂಡಿರುವ ಬಗ್ಗೆ ಸಕ್ಷಮ ಪ್ರಾಧಿಕಾರದಿಂದ ಪಡೆದ ಪ್ರಮಾಣ ಪತ್ರ ಪಡೆದಿರುವುದನ್ನು ಜಿಲ್ಲಾ ಉಪ ನಿರ್ದೇಶಕರು ಖಚಿತಪಡಿಸಿಕೊಳ್ಳತಕ್ಕದ್ದು. ಮಾನ್ಯ ಸರ್ವೋಚ್ಚ ನ್ಯಾಯಲಯವು ರಿಟ್ ಅರ್ಜಿ (ಸಿವಿಲ್) ಸಂಖ್ಯೆ: 483/2004 ರಲ್ಲಿನ ದಿನಾಂಕ: 13-04-2009 ರ ತೀರ್ಪಿನಲ್ಲಿ ಶಾಲಾ ಕಾಲೇಜುಗಳ ಕಟ್ಟಡವು ಸುರಕ್ಷಿತ ಮತ್ತು ಎಲ್ಲಾ ಕೋನಗಳಿಂದ ಸುಭದ್ರವಾಗಿರುವ ಬಗ್ಗೆ ಲೋಕೋಪಯೋಗಿ ಇಲಾಖೆಯ ಕಾರ್ಯಪಾಲಕ ಅಭಿಯಂತರರಿಂದ ಮತ್ತು ಅಗ್ನಿಶಾಮಕ ಉಪಕರಣಗಳು ಸುಸ್ಥಿತಿಯಲ್ಲಿರುವ ಬಗ್ಗೆ ಪ್ರತಿ ವರ್ಷ ಸಕ್ಷಮ ಪ್ರಾಧಿಕಾರದಿಂದ ಸಮಾಪನಾ ಪ್ರಮಾಣ ಪತ್ರ ಪಡೆಯತಕ್ಕದ್ದು, ಈ ಕುರಿತು ಜಿಲ್ಲಾ ಉಪ ನಿರ್ದೇಶಕರು ಕಾಲಕಾಲಕ್ಕೆ ಮೇಲ್ವಿಚಾರಣೆ ನಡೆಸತಕ್ಕದ್ದು.

ಒಂದು ವೇಳೆ ವಿದ್ಯಾಸಂಸ್ಥೆಯು ಮೇಲಿನ ನಿಬಂಧನೆ / ಷರತ್ತುಗಳನ್ನು ಪಾಲಿಸಲು ವಿಫಲವಾದಲ್ಲಿ ಕಾಲೇಜು ಮಂಜೂರಾತಿ ಆದೇಶ ರದ್ದುಪಡಿಸಲು ಸೂಕ್ತ ಪ್ರಸ್ತಾವನೆಯನ್ನು ಜಿಲ್ಲಾ ಉಪ ನಿರ್ದೇಶಕರು ತಪ್ಪದೇ ಸಲ್ಲಿಸತಕ್ಕದ್ದು.
ಮೇಲಿನ ಎಲ್ಲಾ ನಿಬಂಧನೆಗಳು/ಷರತ್ತುಗಳಲ್ಲಿ ಯಾವುದೇ ನಿಬಂಧನೆಗಳು / ಷರತ್ತನ್ನು ಪಾಲಿಸದಿದ್ದಲ್ಲಿ ಮಂಜೂರಾತಿ ಆದೇಶವನ್ನು ನಿಯಮಾನುಸಾರ ರದ್ದುಪಡಿಸಲಾಗುವುದು.

Signed by Ramachandran R
Date: 06-08-2022 12:47:59

ಗೆ,

ಅಧ್ಯಕ್ಷರು/ಕಾರ್ಯದರ್ಶಿಗಳು, ಮಹಾಜನ ವಿದ್ಯಾಸಂಸ್ಥೆ(ರಿ), ಜಯಲಕ್ಷ್ಮೀಪುರಂ, ಮೈಸೂರು-570012

ಪ್ರತಿಗಳು:-

1. ಉಪ ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಮೈಸೂರು ಜಿಲ್ಲೆ, ಮೈಸೂರು
2. ಪ್ರಾಂಶುಪಾಲರು, ಆರ್‌ಪಿಬಿ ಪಿಯು ಕಾಲೇಜು ಪೂಜಾ ಭಾಗವತ್ ಸ್ಮಾರಕ ಮಹಾಜನ ವಿದ್ಯಾಕೇಂದ್ರ, ಕೆ.ಆರ್.ಎಸ್.ರಸ್ತೆ, ಕೆ.ಕೆ.ಟೈರ್ ಎದುರು, ಮೇಟಗಹಳ್ಳಿ, ಮೈಸೂರು-16
3. ಸಹಾಯಕ ನಿರ್ದೇಶಕರು, ಗಣಕ ಶಾಖೆ, ಕೇಂದ್ರ ಕಛೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-560012.
4. ಕಛೇರಿ / ಹೆಚ್ಚುವರಿ ಪ್ರತಿ

Scanned with CamScanner